**M.V.C.No.346/2023** **RW-1**

ದಿನಾಂಕಃ **11/08/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಎದುರುದಾರರ ಪರ ವಕೀಲರಿಂದಃ

ನಾನು ಈ ಪ್ರಕರಣದಲ್ಲಿ 2ನೇ ಎದುರುದಾರ ಕಂಪನಿಯ ಲೀಗಲ್ ಆಫೀಸರ್ ಆಗಿದ್ದು ನ್ಯಾಯಾಲಯದ ಮುಂದೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದನ್ನು ಓದಿ ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ.

ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ನಿಶಾನೆ ಆರ್-1- Authorization letter

ನಿಶಾನೆ ಆರ್-2- insurance policy

ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ

ನಾನು 2ನೇ ಎದುರುದಾರರ ವಿಮಾ ಕಂಪನಿಗೆ 2023 ರಲ್ಲಿ ಸೇರಿದ್ದೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪಘಾತ ದಿಃ 19-04-2023 ರಲ್ಲಿ ಆಗಿರುತ್ತದೆ. ಅಪಘಾತ ಆದಾಗ ನಾನು ಆ ಕಂಪನಿಯಲ್ಲಿ ಕೆಲಸ ಮಾಡುತಿದ್ದೆನು. ಯಾವುದೇ ಅಪಘಾತ ಆದಾಗ ತನಿಖೆ ಮಾಡುತ್ತೇವೆ. ಈ ಪ್ರಕರಣದಲ್ಲಿ ಆಂತರಿಕ ತನಿಖೆ ಮಾಡಿದ್ದೇವೆ. ಆ ತನಿಖಾ ವರದಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. Criminal ಪ್ರಕರಣದ ದಾಖಲಾತಿಗಳ ಆಧಾರದ ಮೇಲೆ ನಾವು 3 ಜನ ಪ್ರಯಾಣಿಸುತಿದ್ದರು ಎಂದು ಹೇಳುತಿದ್ದೇವೆ. 3 ಜನ ಪ್ರಯಾಣ ಮಾಡುತಿದ್ದವರ ಪೈಕಿ ಎಷ್ಟು ಜನ ಪ್ರಾಪ್ತರು ಮತ್ತು ಎಷ್ಟು ಜನ ಅಪ್ರಾಪ್ತರು ಇದ್ದರು ಎಂದರೆ ದಾಖಲೆ ನೋಡಿ ಹೇಳಬೇಕಾಗುತ್ತದೆ. ಅದರಲ್ಲಿ ಒಬ್ಬರು ಅಪ್ರಾಪ್ತರು ಇದ್ದ ಕಾರಣ 3 ಜನ ಪ್ರಯಾಣ ಮಾಡುವುದು ತಪ್ಪಲ್ಲ ಎಂದರೆ ಸರಿಯಲ್ಲ. ಮಗುವನ್ನು ಶಾಲೆಗೆ ಬಿಡಲು ಹೋಗುತಿದ್ದ ಸಮಯದಲ್ಲಿ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಸದರಿ ಕೇಸಿನಲ್ಲಿ ನಮ್ಮ ಕಂಪನಿಯ ವಿಮೆಗೆ ಒಳಪಟ್ಟಿರುವ ಗಾಡಿ ನಂ.KA-46-7498 ಕ್ಕೆ ನಮ್ಮ ಕಂಪನಿಯಲ್ಲಿ ವಿಮೆ ಇತ್ತು. ನಾವು ಅರ್ಜಿದಾರರಿಗೆ ಪರಿಹಾರ ಕೊಡಲು ತಪ್ಪಿಸಿಕೊಳ್ಳುವ ಉದ್ದೇಶದಿಂದ

ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. 1ನೇ ಎದುರುದಾರರ ವಾಹನಕ್ಕೆ ವಿಮೆ ಇದೆ ಎಂದರೆ ನಿಜ. ಆ ವಾಹನದ ಚಾಲಕನ ನಿರ್ಲಕ್ಷತನದಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಪೊಲೀಸ್ ತನಿಖೆಯಿಂದ ಸದರಿ ವಾಹನದ ಚಾಲಕನೇ ಅಪಘಾತ ಮಾಡಿದ್ದಾನೆ ಎಂದು ಗೊತ್ತಿದ್ದರೂ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಕೊಡಲು ನಾವು ಬಾಧ್ಯರು ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ಲೋಕೇಶ ಎಂ.ಜಿ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು